**3 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ, ಹುಬ್ಬಳ್ಳಿ**

**ಸಿ.ಸಿ.ನಂ.3281/2023**

ಪಿರ್ಯಾದಿಃ ಮೆ// ಅನೀಲಕುಮಾರ ಆಂಡ ಕಂಪನಿ
ಹುಬ್ಬಳ್ಳಿ

**ವಿರುದ್ಧ**

ಆರೋಪಿಃ ಗಂಗಾಧರ ತಂದೆ ಅರ್ಜುನಸಾ ಕಲಬುರ್ಗಿ
ಹುಬ್ಬಳ್ಳಿ

**-ಃ ಅರೋಪಿ ಹೇಳಿಕೆ 313 ದಂಡ ಪ್ರಕ್ರಿಯ ಅನ್ವಯ ಃ-**

**ಪ್ರಶ್ನೆ.1ಃ ಇದುವರೆಗೂ ಈ ಪ್ರಕರಣದಲ್ಲಿ ಫಿರ್ಯಾದಿದಾರರು ಹೇಳಿದ ಸಾಕ್ಷ್ಯವನ್ನು ತಿಳಿದುಕೊಂಡಿದ್ದೀರಾ?**

**ಉತ್ತರಃ**

**ಪ್ರಶ್ನೆ.2ಃ ಪಿಡಬ್ಲ್ಯೂ-1 –** ಶ್ರೀ ಸಿದ್ದರಾಮಪ್ಪ ತಂದೆ ಬಶೆಟ್ಟಪ್ಪ ಆನೆಪ್ಪನವರ ತಮ್ಮ ಮುಖ್ಯ ವಿಚಾರಣೆಯಲ್ಲಿ, ಆರೋಪಿತರಾದ ನೀವು ಪಿರ್ಯಾದಿದಾರರೊಂದಿಗೆ 2015 ರಿಂದ ವ್ಯವಹರಿಸುತ್ತಿದ್ದು, ಪಿರ್ಯಾದಿದಾರರಿಗೆ ಹತ್ತಿ, ಮತ್ತು ಬೀಜಗಳನ್ನು ಸರಬರಾಜು ಮಾಡುತ್ತಿದ್ದು ನೀವು ಪಿರ್ಯಾದಿದಾರರಿಂದ ಹತ್ತಿ ಸರಬರಾಜು ಮಾಡುವ ಬಾಬತು ರೂ.30,00,000/- ಗಳನ್ನು ಮುಂಗಡ ಹಣವನ್ನು ದಿನಾಂಕ 05.09.2020 ರಂದು ಚೆಕ ನಂ.357709 ಯುನಿಯನ ಬ್ಯಾಂಕ ಆಫ ಇಂಡಿಯ ಮುಲಕ ನಿಮಗೆ ನೀಡಿದ್ದು ನೀವು ಪಿರ್ಯಾದಿದಾರರಿಗೆ ಹತ್ತಿಯನ್ನು ಸರಬರಾಜು ಮಾಡಿರುವುದಿಲ್ಲ ಎಂದು ಹೇಳಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಾ?

**ಉತ್ತರಃ-**

**ಪ್ರಶ್ನೆ.3ಃ** ಪಿ.ಡಬ್ಲ್ಯು-1 ರವರು ತಮ್ಮ ಮುಂದುವರಿದ ಮುಖ್ಯ ವಿಚಾರಣೆಯಲ್ಲಿ ಪಿರ್ಯಾದಿದಾರರು ತಮಗೆ ಬರಬೇಕಾದ ಮುಂಗಡ ಹಣವನ್ನು ಸಂದಾಯ ಮಾಡುವಂತೆ ಕೇಳಿಕೊಂಡಾಗ ಆರೋಪಿತರಾದ ನೀವು ದಿಃ28.07.2023 ಯುನಿಯನ ಬ್ಯಾಂಕ ಆಫ್ ಇಂಡಿಯಾ. ಹುಬ್ಬಳ್ಳಿ ಮೇನ ಬ್ರಾಂಚ ಚೆಕ್ಕ ನಂ.370162 ರೂ.30,00,000/- ಎಂದು ನಮೂದಿಸಿ ಫಿರ್ಯಾದಿದಾರರಿಗೆ ಒಂದು ಚೆಕ್ಕನ್ನು ಕೊಟ್ಟಿರುತ್ತೀರಿ. ಸದರಿ ಚೆಕ್ಕನ್ನು ನಗದಿಕರಣಕ್ಕೆ ಫಿರ್ಯಾದಿದಾರರು ತಮ್ಮ ಬ್ಯಾಂಕ ಆದ ಯುನಿಯನ ಬ್ಯಾಂಕ ಆಫ್ ಇಂಡಿಯಾ.

ಎಪಿಮಸಿ ಹುಬ್ಬಳ್ಳಿ ಶಾಖೆಗೆ ಸಲ್ಲಿಸಿದಾಗ ಸದರಿ ಚೆಕ್ಕು **"FUNDS INSUFFICIENT"** ಎಂಬ ಶರಾದೊಂದಿಗೆ ದಿಃ28.07.2023 ನೀಡಿರುತ್ತಾರೆ ಎಂದು ಹೇಳಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಾ**?**

**ಉತ್ತರಃ-**

**ಪ್ರಶ್ನೆ.4ಃ ಪಿ.ಡಬ್ಲ್ಯು-1 ರವರು ತಮ್ಮ ಮುಂದುವರಿದ ಮುಖ್ಯ ವಿಚಾರಣೆಯಲ್ಲಿ** ಈ ಬಗ್ಗೆ ಆರೋಪಿತರಾದ ನಿಮಗೆ ದಿಃ09.08.2023 ರಂದು ನೋಟಿಸು ನೀಡಿದ್ದು, ಸದರಿ ನೋಟಿಸು ನಿಮಗೆ ದಿನಾಂಕ 18.08.2023 ರಂದು ನೀವು ಸ್ವೀಕರಿಸಿದ್ದು ಆದರೆ ಅದಕ್ಕೆ ಯಾವುದೇ ಉತ್ತರ ನೀಡಿರುವುದಿಲ್ಲ ಮತ್ತು ಚೆಕ್ಕಿನ ಮೊತ್ತವನ್ನು ಮರುಪಾವತಿಸಿರುವುದಿಲ್ಲ ಎಂದು ಹೇಳಿರುತ್ತಾರೆ. ಈ ಬಗ್ಗೆ ನೀವು ಏನು ಹೇಳುತ್ತೀರಾ?

**ಉತ್ತರಃ-**

**ಪ್ರಶ್ನೆ.5ಃ ನಿಮಗೆ** ಈ ಕೇಸಿನ ಬಗ್ಗೆ ಏನನ್ನಾದರು **ಹೇಳಲು ಇದೆಯೇ ?**
**ಉತ್ತರಃ**

**ಪ್ರಶ್ನೆ.6ಃ ನಿಮ್ಮ ಪರ ಯಾರಾದರೂ ಸಾಕ್ಷಿದಾರರು ಇದ್ದಾರೆಯೇ ?**
**ಉತ್ತರಃ**

**(ಈ ಮೇಲಿನ ಸಾಕ್ಷಿದಾರರ ಹೇಳಿಕೆಗಳನ್ನು ಅರೋಪಿತರಿಗೆ ನನ್ನ ಸಮಕ್ಷಮ ಓದಿ ಹೇಳಲಾಯಿತು ಹಾಗೂ ಈ ದಾಖಲೆಯು ಅರೋಪಿ ನೀಡಿದ ಪೂರ್ತಿಯಾದ ಹಾಗೂ ಸರಿಯಾದ ಉತ್ತರಗಳನ್ನು ಒಳಗೊಂಡಿದೆ ಎಂದು ದೃಢೀಕರಿಸಿದೆ)**

**ದಿನಾಂಕ** ಃ02.11.2023
**ಸ್ಥಳ** ಃ ಹುಬ್ಬಳ್ಳಿ.

(ಶ್ರೀಮತಿ ಶರ್ಮಿಳಾ ಕಾಮತ ಕೆ)
3 ನೇ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಹುಬ್ಬಳ್ಳಿ.